**ಓ ಎಸ್ ನಂಃ 226/2021**
**ಪಿ ಡಬ್ಲ್ಯೂ ಃ 1**

**ದಿಃ 19.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ಎನ್ ವಿ ವಕೀಲರಿಂದಃ-**

ಈ ದಾವೆಯ ಪ್ರತಿವಾದಿಯು ತಮ್ಮ ವಿರುದ್ಧ ಅಸಲು ದಾವಾ ಸಂಖ್ಯೆ 7/1992 ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ತಾವು ಸಲ್ಲಿಸಿರುವ ತಕರಾರಿನ ಬಗ್ಗೆ ತಮಗೆ ಗೊತ್ತಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ತಮ್ಮ ಲಿಖಿತ ಪತ್ರದಲ್ಲಿ ಈ ದಾವೆಯ ಪ್ರತಿವಾದಿಯ ಹೆಸರಿಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲ ಎಂದು ಹೇಳಿ ಬರೆಸಿದ್ದೀರಿ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಪ್ರತಿವಾದಿಯಿಂದ ದಾವಾ ಸ್ವತ್ತಿನ ಸ್ವಾಧೀನವನ್ನು ಬಿಡಿಸಿಕೊಡಿ ಎಂದು ಕೇಳಿದ್ದೀರಿ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನನಗೆ ದಾವಾ ಸ್ವತ್ತಿನ ಸ್ವಾಧೀನವನ್ನು ಕೊಡುವಂತೆ ಪ್ರತಿವಾದಿಗೆ ಆದೇಶ ಮಾಡಿರುತ್ತಾರೆ. ಸದರಿ ದಾವೆಯಲ್ಲಿ ತಾವು ದಾವಾ ಸ್ವತ್ತಿನ ಸ್ವಾಧೀನವನ್ನು ಕೇಳಿಲ್ಲ ಮತ್ತು ಅದರಂತೆ ಆದೇಶ ಸಹ ಆಗಿಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರದ ಬಗ್ಗೆ ತಮಗೆ ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 7/1992 ರ ತೀರ್ಪು ಮತ್ತು ಡಿಕ್ರಿ ವಿರುದ್ಧ ಪ್ರತಿವಾದಿಯು ರಾಮನಗರದ ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಸರಿ. ಆರ್ ಎ 2/1999 ಪ್ರತಿವಾದಿ ಪರ ತೀರ್ಪು ಆಗಿದೆ ಎಂದರೆ ಸರಿ. ಆರ್ ಎ 2/1999 ರ ತೀರ್ಪು ಮತ್ತು ಡಿಕ್ರಿ ವಿರುದ್ಧ ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ್ ಎಸ್ ಎ 885/2005 ರಲ್ಲಿ ಮೇಲ್ಮನವಿ ಸಲ್ಲಿಸಿದ್ದೀರಿ ಎಂದರೆ ಸರಿ. ಮಾನ್ಯ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ಆರ್ ಎಸ್ ಎ 885/2005 ನ್ನು ಪುರಸ್ಕರಿಸಿ ಪ್ರಕರಣವನ್ನು ಮರುವಿಚಾರಣೆಗಾಗಿ ರಿಮ್ಯಾಂಡ್ ಮಾಡಲಾಗಿತ್ತು ಎಂದರೆ ಸರಿ. ಆನಂತರ ಪುನಃ ಆರ್ ಎ 2/1999 ವಜಾ ಆಯಿತು ಸದರಿ ತೀರ್ಪಿನ ವಿರುದ್ಧ ಪ್ರತಿವಾದಿಯು ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ್ ಎಸ್ ಎ 2606/2006 ಸಲ್ಲಿಸಿದ್ದಾರೆ ಎಂದರೆ ಸರಿ. ಈ ಮೇಲ್ಕಂಡ ಪ್ರಕರಣಗಳಲ್ಲಿ ದಾವಾ ಸ್ವತ್ತಿನ ಸ್ವಾಧೀನವನ್ನು ಪ್ರತಿವಾದಿಯಿಂದ ಬಿಡಿಸಿಕೊಡುವಂತೆ ಕೇಳಿಲ್ಲ ಎಂದರೆ ನಾವು ಮೇಲ್ಕಂಡ ಎಲ್ಲಾ ದಾವೆ ಮತ್ತು ಪ್ರಕರಣಗಳಲ್ಲಿ ಗೆದ್ದಿದ್ದೇವೆ ಎಂದು ನುಡಿಯುತ್ತಾರೆ. ಯಾವ ದಾಖಲೆಯ ಆದಾರದ ಮೇರೆಗೆ ತಾವು ಪ್ರತಿವಾದಿಗೆ ದಾವಾ ಸ್ವತ್ತಿನ

ಸ್ವಾಧೀನವನ್ನು ನೀಡಿದ್ದೀರಿ ಎಂದರೆ ಸಾಕ್ಷಿಯು ಭೋಗ್ಯ ಪತ್ರ ಮೂಲಕ ಎಂದು ನುಡಿಯುತ್ತಾರೆ.

ಅಸಲು ದಾವಾ ಸಂಖ್ಯೆ 124/1992 ರ ತಿರ್ಪಿನ ವಿರುದ್ಧ ತಾವೇನಾದರೂ ಮೇಲ್ಮನವಿ ಸಲ್ಲಿಸಿದ್ದೀರ ಎಂದರೆ ಸಾಕ್ಷಿ ಸಲ್ಲಿಸಿದ್ದೇವೆ. ಸದರಿ ಮೇಲ್ಮನವಿಯ ನಂಬರ್ ಆರ್ ಎ 117/2008 ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪೀಲು ಸಹ ವಜಾ ಆಗಿದೆ ಎಂದರೆ ನನಗೆ ಈಗ ನೆನಪಿಲ್ಲ.ಅಸಲು ದಾವಾ ಸಂಖ್ಯೆ 124/1992 ಮತ್ತು ಆರ್ ಎ 117/2008 ರಲ್ಲಿ ದಾವಾ ಸ್ವತ್ತಿನ ಸ್ವಾಧೀನವನ್ನು ತಮಗೆ ಕೊಡಿಸಿಕೊಡಬೇಕೆಂದು ಆದೇಶ ಮಾಡಿಲ್ಲ ಎಂದರೆ ಸರಿಯಲ್ಲ. ದಿಃ 10.07.1989 ರ ಭೋಗ್ಯ ಪತ್ರದ ಪ್ರಕಾರ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂಬುದು ತಮಗೆ ಗೊತ್ತು ಎಂದರೆ ಸರಿ. ಈ ದಾವೆಯನ್ನು ಸಲ್ಲಿಸುವ ತನಕ ಪ್ರತಿವಾದಿಯಿಂದ ದಾವಾ ಸ್ವತ್ತಿನ ಸ್ವಾಧೀನವನ್ನು ಬಿಡಿಸಿಕೊಡಬೇಕೆಂದು ಕೋರಿ ಬೇರೆ ದಾವೆಯನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**